NOVEMBER 05, 2024

AKASHAVANI - DHARWAD

PRADESH SAMACHARA (KANNADA) 07.05 A.M.

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

ಮುಖ್ಯಾಂಶಗಳು:

- ಕೋಟಿ ವೃಕ್ಷ ಅಭಿಯಾನ; ವಿಜಯಪುರ ಜಿಲ್ಲೆಯಲ್ಲಿ, ಯಶಸ್ವಿಯಾಗಿ ಮುಂದುವರಿಕೆ – ಎಂ.ಬಿ.ಪಾಟೀಲ.
- ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯ, 22 ಸಾವಿರ ಕೆರೆಗಳ ಅತಿಕ್ರಮಣ ತೆರವಿಗೆ ಕ್ರಮ – ಎನ್.ಎಸ್. ಬೋಸರಾಜು.
- ಕಾಫಿ ಗುಣಮಟ್ಟ ಹೆಚ್ಚಿಸುವ, ವಿನೂತನ ಯೋಜನೆಗೆ, ಭಾರತೀಯ ಕಾಫಿ ಮಂಡಳಿ ಯೋಜನೆ – ಕೆ.ಜಿ.ಜಗದೀಶ.
- ರಾಜ್ಯ ಜಾನಪದ ಅಕಾದೆಮಿ, 2023ನೇ ಸಾಲಿನ ಗೌರವ ಪ್ರಶಸ್ತಿಗೆ, 30 ಜನ ಜಾನಪದ ಕಲಾವಿದರು ಭಾಜನ – ಗೊಲ್ಲಹಳ್ಳಿ ಶಿವಪ್ರಸಾದ.

<><><>

ಈಗ ವಾರ್ತೆಗಳ ವಿವರ

ವಿಜಯಪುರ ಜಿಲ್ಲೆಯಲ್ಲಿ, ಕೋಟಿ ವೃಕ್ಷ ಅಭಿಯಾನ ಕೈಗೊಂಡು, 1 ಕೋಟಿ 50 ಲಕ್ಷ ಗಿಡಗಳನ್ನು ನೆಟ್ಟು, ಪೋಷಿಸುವ ಕಾರ್ಯ, ಯಶಸ್ವಿಯಾಗಿ ನಡೆದಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ. ಬಸವನಾಡಿನಲ್ಲಿ ಮತ್ತ ್ಟ ಹಸಿರು ಕಂಗೊಳಿಸಿ, ವಿಜಯಪುರದ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಯ ಕುರಿತು, ಜಾಗೃತಿ ಮೂಡಿಸಲು, ಬರುವ ಡಿಸೆಂಬರ್ 22 ಭಾನುವಾರ, 'ವೃಕ್ಷೋಥಾನ್ ಹೆರಿಟೇಜ್ ರನ್' ಆಯೋಜಿಸಿದ್ದಾಗಿ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಪ್ರಕಟಿಸಿದ್ದಾರೆ. #ವೃಕ್ಷೋಥಾನ್ ಹೆರಿಟೇಜ್ ರನ್ – 2024' ರಲ್ಲಿ, 5, 10 ಮತ್ತು 21 ಕಿಲೋ ಮೀಟರ್‌ಗಳ ಮ್ಯಾರಾಥಾನ್ ಓಟಗಳಿದ್ದು, 15 ಸಾವಿರಕ್ಕೂ ಹೆಚ್ಚು ಓಟಗಾರರು ಪಾಲ್ಗೊಳ್ಳಲಿದ್ದಾರೆ.

<><><>

ತುಮಕೂರು ಜಿಲ್ಲೆಯಲ್ಲಿ, ಪರಿಭಾವಿತ ಅರಣ್ಯ ಎಂದು ಗುರುತಿಸಲಾದ, 13 ಸಾವಿರ ಹೆಕ್ಟರ್ ಪ್ರದೇಶವನ್ನು, ಅರಣ್ಯ, ಕಂದಾಯ ಮತ್ತು ಭೂ ದಾಖಲೆಗಳ ಇಲಾಖೆ, ಸಂಯುಕ್ತವಾಗಿ ಸಮೀಕ್ಷೆ ನಡೆಸಿ, ಸಮಗ್ರ ವರದಿ ಸಲ್ಲಿಸುವಂತೆ, ಜಿಲ್ಲಾಧಿಕಾರಿ ಸುಭಾ ಕಲ್ಯಾಣ್, ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ. 'ಕೆಸ್ವಾನ್' ಸಭಾಂಗಣದಲ್ಲಿ, ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಪರಿಭಾವಿತ ಅರಣ್ಯವೆಂದು ಗುರುತಿಸಲಾಗಿರುವ ಪ್ರದೇಶಗಳಲ್ಲಿ, ಸರ್ಕಾರಿ, ಖಾಸಗಿ ಪ್ರದೇಶಗಳನ್ನು ಪ್ರತ್ಯೇಕಿಸಬೇಕಿದೆ ಎಂದು, ಅವರು ತಿಳಿಸಿದರು. ಬಗ್ಗೈರ್ ಹುಕುಂ ಸಮಸ್ಯೆಗಳಿಗೆ ಸಂಬಂಧಿಸಿ, ತೆಹಸೀಲ್ದಾರರು ನಿತ್ಯ ಸಭೆ ನಡೆಸಿ, ಪರಿಹಾರ ಕಲ್ಪಿಸುವಂತೆ ಅವರು, ಸೂಚಿಸಿದರು.

<><><>

ರಾಜ್ಯಾದ್ಯಂತ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯ, 42 ಸಾವಿರದ 270 ಕೆರೆಗಳ ಪೈಕಿ, 22 ಸಾವಿರ ಕೆರೆಗಳನ್ನು ಅತಿಕ್ರಮಿಸಲಾಗಿದೆ. ಅವುಗಳ ತೆರವು ಕಾರ್ಯ ಕೈಗೆತ್ತಿಕೊಳ್ಳಲಾಗಿದೆ ಎಂದು, ಸಣ್ಣ ನೀರಾವರಿ ಖಾತೆ ಸಚಿವ, ಎನ್.ಎಸ್. ಬೋಸರಾಜು ತಿಳಿಸಿದ್ದಾರೆ. ಸಣ್ಣ ನೀರಾವರಿ ಇಲಾಖೆ ಅಧೀನದ, ರಾಯಚೂರಿನ ಐತಿಹಾಸಿಕ ಮಾವಿನ ಕೆರೆ ಸಮಗ್ರ ಅಭಿವೃದ್ಧಿಗೆ, ಜಿಲ್ಲಾ ಉಸ್ತುವಾರಿ ಸಚಿವ ಶರಣ ಪ್ರಕಾಶ ಪಾಟೀಲ ಹಾಗೂ ಸಚಿವ ಎನ್.ಎಸ್. ಬೋಸರಾಜು, ಹಿರಿಯ ಮಠಾಧೀಶರು ಚಾಲನೆ ನೀಡಿದರು. 115 ಎಕರೆ ವ್ಯಾಪ್ತಿಯ ಮಾವಿನಕೆರೆಯನ್ನು, 5 ಕೋಟಿ ರೂಪಾಯಿ ಹೆಚ್ಚದಲ್ಲಿ, ಸಮಗ್ರವಾಗಿ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ ಎಂದ, ಸಚಿವರುಗಳು, ಕೆರೆ ಸುತ್ತಲೂ ಪಾದಚಾರಿ ಮಾರ್ಗ, ಕಾರಂಜಿ, ವ್ಯಾಯಾಮ ಶಾಲೆ ಮತ್ತು ಮಕ್ಕಳ ಆಟಿಕೆಗಳನ್ನು ಅಳವಡಿಸಲು ಯೋಜನೆ ಸಿದ್ಧಗೊಂಡಿದೆ, ಎಂದರು.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ಖಾಸಗಿ ಕಂಪೆನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ, ‘ನನ್ನ ಶಾಲೆ ನನ್ನ ಕೊಡುಗೆ ಯೋಜನೆ’ ಅನುಷ್ಠಾನಗೊಂಡಿದೆ. ಸರ್ಕಾರಿ ಶಾಲೆಗಳ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದ್ದಾರೆ. ಜಿಲ್ಲೆಯಲ್ಲಿ ಒಟ್ಟು, 49 ಕೋಟಿ ರೂಪಾಯಿ ವೆಚ್ಚದಲ್ಲಿ, ನೆಲಮಂಗಲದಲ್ಲಿ 36, ದೊಡ್ಡಬಳ್ಳಾಪುರದಲ್ಲಿ 22, ಹೊಸಕೋಟೆ 33, ದೇವನಹಳ್ಳಿಯಲ್ಲಿ 36 ಸೇರಿದಂತೆ, 130 ಸರ್ಕಾರಿ ಶಾಲೆಗಳಲ್ಲಿ, ಮೂಲ ಸೌಕರ್ಯ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ ಎಂದಿದ್ದಾರೆ.

<><><>

ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿ ‘ತ್ತಿನ, 4ನೇ ವೈಜ್ಞಾನಿಕ ಸಮ್ಮೇಳನ, ಡಿಸೆಂಬರ್ 28 ಹಾಗೂ 29 ರಂದು, ಬೆಂಗಳೂರಿನಲ್ಲಿ ಜರುಗಲಿದೆ ಎಂದು, ಪರಿ ‘ತ್ತಿನ ಸಂಸ್ಥಾಪಕ ಅಧ್ಯಕ್ಷ ಹುಲಿಕಲ್ ನಟರಾಜ್ ತಿಳಿಸಿದ್ದಾರೆ. ಯಾದಗಿರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ರಂಗ ನಿರ್ದೇಶಕಿ ಉಮಾಶ್ರೀ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ. ವೈಜ್ಞಾನಿಕ ಮನೋಭಾವ ಬಿತ್ತಲು ಶ್ರಮಿಸಿದ, ಪ್ರತಿ ಜಿಲ್ಲೆಗೆ ಒಬ್ಬರಂತೆ, ಒಟ್ಟು 36 ಜನ ಸಾಧಕರನ್ನು ಈ ಬಾರಿ ಗುರುತಿಸಿ, ಡಾಕ್ಟರ್ ಎಚ್.ನರಸಿಂಹಯ್ಯ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು. ಯಾದಗಿರಿ ಜಿಲ್ಲೆಗೆ ವಿಜ್ಞಾನ ಕೇಂದ್ರವನ್ನು ಮಂಜೂರು ಮಾಡಲು, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಎನ್.ಎಸ್. ಬೋಸರಾಜು ಅವರಿಗೆ ಒತ್ತಾಯಿಸುವುದಾಗಿ, ಹುಲಿಕಲ್ ನಟ ತಿಳಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

ಹೋಬಳಿ ಮಟ್ಟದಲ್ಲಿ ಸಮುದಾಯ ಕೃಷಿಕ ಗುಂಪುಗಳನ್ನು ಸಂಘಟಿಸಿ, ಕಾಫಿ ಗುಣಮಟ್ಟ ಹೆಚ್ಚಿಸುವ, ವಿನೂತನ ಯೋಜನೆಗೆ, ಭಾರತೀಯ ಕಾಫಿ ಮಂಡಳಿ ಮುಂದಾಗಿದೆ ಎಂದು, ಮಂಡಳಿಯ ಕಾರ್ಯದರ್ಶಿ ಕೆ.ಜಿ.ಜಗದೀಶ ಹೇಳಿದ್ದಾರೆ. ಮಡಿಕೇರಿಯಲ್ಲಿ ಕೂರ್ಗ ಕಾಫಿ ಪ್ಲಾಂಟರ್ಸ್ ಅಸೋಸಿಯೇ ‘ನ್ ನ, 145ನೇ ವಾರ್ಷಿಕ ಮಹಾಸಭೆ ಉದ್ಘಾಟಿಸಿ, ಅವರು ಮಾತನಾಡಿದರು. ಪ್ರತಿ ಹೋಬಳಿಯಲ್ಲಿ 100 ಕೃಷಿಕರನ್ನು ಒಳಗೊಂಡ, ಸಮುದಾಯ ಗುಂಪನ್ನು ಪ್ರಾರಂಭಿಸಲಾಗುವುದು. ಅವರು ಬೆಳೆದ ಕಾಫಿಯನ್ನು ಸಂಗ್ರಹಿಸಿ, ‘ಕಾಫಿ ಕಪ್ಪಿಂಗ್ ಸ್ಟೋರ್’ ಗುಣಮಟ್ಟದ ಬಗ್ಗೆ, ಪ್ರಯೋಗಾಲಯದಿಂದ ಮಾಹಿತಿ ಪಡೆದು, ಸಕಾಲಿಕ ಮಾರ್ಗದರ್ಶನದ ಮೂಲಕ, ಕಾಫಿ ಗುಣಮಟ್ಟ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಲಾಗುವುದು. ವಿಶೇಷ ಕೋರ್ಸ್‌ಗಳನ್ನು ಸಹ ಆರಂಭಿಸಲಾಗುವುದು ಎಂದು, ಅವರು ತಿಳಿಸಿದರು.

<><><>

ರಾಜ್ಯ ಜಾನಪದ ಅಕಾದೆಮಿ, 2023ನೇ ಸಾಲಿನ ಗೌರವ ಪ್ರಸ್ತಿಗಳನ್ನು ಪ್ರಕಟಿಸಿದ್ದು, ರಾಜ್ಯದ 30 ಜಿಲ್ಲೆಗಳಿಂದ 30 ಜಾನಪದ ತಜ್ಞ ಕಲಾವಿದರು, ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ ಎಂದು, ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ ತಿಳಿಸಿದ್ದಾರೆ. ಬೆಂಗಳೂರಿನ ಕನ್ನಡ ಭವನದ, ಅಂತರಂಗ ಸಭಾಂಗಣದಲ್ಲಿ ಅವರು, ಸುದ್ದಿಗೋಷ್ಠಿ ನಡೆಸಿದರು. 2022 ಹಾಗೂ 2023 ನೇ ಸಾಲಿಗೆ ಒಟ್ಟು ಐವರಿಗೆ ಪುಸ್ತಕ ಬಹುಮಾನಗಳು ಸಂದಿವೆ ಎಂದರು.

<><><>

ಉಡುಪಿಯ ಜನಪದ ಸೂಲಗಿತ್ತಿ ಅಪ್ಪಿ, ದಕ್ಷಿಣ ಕನ್ನಡದ ನಾಟಿ ವೈದ್ಯೆ ಲೀಲಾವತಿ, ಚಾಮರಾಜನಗರದ ಸೋಬಾನೆ ಪದಗಳ ಅಂಧ ಕಲಾವಿದೆ ಗೌರಮ್ಮ, ಬಾಗಲಕೋಟೆಯ ಗೋಂದಳಿ ಪದಗಳ ಕಲಾವಿದ ಹನಮಂತ ಸುಗತೇಕರ, ವಿಜಯಪುರದ ತತ್ವಪದಗಳ ಗಾಯಕಿ, ಇಮಾಂಬಿ ದೊಡ್ಡಮನಿ ಪ್ರಶಸ್ತಿಗೆ ಭಾಜನರಾದ ಪ್ರಮುಖರು.

<><><>

ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ, ಆಕಾಶವಾಣಿಯ ಹಿರಿಯ ಶ್ರೇಣಿ ಕಲಾವಿದರೂ ಆಗಿರುವ, ಹುಬ್ಬಳ್ಳಿಯ ಹಂತಿ ಪದಗಳ ತಜ್ಞ, ಡಾಕ್ಟರ್ ರಾಮಣ್ಣ ಮೂಲಗಿ.

<><><>

ಡಾ. ರಾಮಣ್ಣ ಮೂಲಗಿ 40 ಸೆಕೆಂದುಗಳು

ಹುಬ್ಬಳ್ಳಿಯ, ಕರ್ನಾಟಕ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ – ಕೆ.ಎಂ.ಸಿ. ಆರ್.ಐ. ಆತಿಥ್ಯದಲ್ಲಿ, ಇಂದಿನಿಂದ ನಾಲ್ಕು ದಿನಗಳ, ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ, 22ನೇ ಅಂತರ್ ಕಾಲೇಜು ಅಥ್ಲೆಟಿಕ್ ಚಾಂಪಿಯನ್‌ಶಿಪ್ ಕ್ರೀಡಾಕೂಟ ಆಯೋಜಿತವಾಗಿದೆ. ರಾಜ್ಯದ 101 ವೈದ್ಯಕೀಯ ಮಹಾವಿದ್ಯಾಲಯಗಳಿಂದ, 903 ಕ್ರೀಡಾಪಟುಗಳು ಹೆಸರು ನೋಂದಾಯಿಸಿದ್ದಾರೆ ಎಂದು, ಕೆ.ಎಂ.ಸಿ. ಆರ್.ಐ. ನಿರ್ದೇಶಕ ಡಾಕ್ಟರ್ ಎಸ್.ಎಫ್. ಕಮ್ಮಾರ, ಮಾಹಿತಿ ನೀಡಿದ್ದಾರೆ.

<><><>

ಬೆಳಗಾವಿಯ ಮಾಹೇಶ್ವರಿ ಅಂಧ ಮಕ್ಕಳ ಶಾಲೆಯ, 8ನೇ ತರಗತಿಯ ವಿದ್ಯಾರ್ಥಿ ಪ್ರಜ್ವಲ ಹನುಮನಟ್ಟಿ, ರಾಷ್ಟ್ರ ಮಟ್ಟದ ಪ್ಯಾರಾ ಈಜು ಚಾಂಪಿಯನ್‌ಷಿಪ್‌ನ ವಿವಿಧ ಸ್ಪರ್ಧೆಗಳಲ್ಲಿ, 6 ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್, ಪ್ರಜ್ವಲ ಅವರನ್ನು ಅಭಿನಂದಿಸಿದ್ದು, ಬೆಳಗಾವಿ ಗ್ರಾಮೀಣ ಭಾಗದ, ಕೆ.ಕೆ. ಕೊಪ್ಪ ಗ್ರಾಮದ ಪ್ರಜ್ವಲ, ಹಳ್ಳಿ ಪ್ರತಿಭೆ. ಅವರ ತರಬೇತುದಾರರಿಗೂ ಶ್ರೇಯ ಸಲ್ಲಬೇಕು ಎಂದು, ಶ್ಲಾಘಿಸಿದ್ದಾರೆ.

<><><>

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, 69ನೇ ಕನ್ನಡ ರಾಜ್ಯೋತ್ಸವ ಸಂಭ್ರಮದ ಅಂಗವಾಗಿ, ಇಂದಿನಿಂದ 30ನೇ ತಾರೀಖಿನ ವರೆಗೆ, ನಾಡು–ನುಡಿಗೆ ವಿಶೇಷ ಕೊಡುಗೆ ನೀಡಿದ, ಹಿರಿಯ ಜೀವಗಳ ಬದುಕು–ಸಾಧನೆ ಕುರಿತು, 'ಧರೆಗೆ ದೊಡ್ಡವರು' ವಿಶೇಷ ಕಾರ್ಯಕ್ರಮ ಆಯೋಜಿಸಿದೆ. ಇಂದು ಬೆಳಗ್ಗೆ 10.30 ಕ್ಕೆ ಈ ವಿಚಾರ ಸಂಕಿರಣವನ್ನು, ನಾಡೋಜ ಹಂಪ ನಾಗರಾಜಯ್ಯ ಉದ್ಘಾಟಿಸುವರು. ಸಂಜೆ 4 ಗಂಟೆಗೆ, ವಾಗ್ಭೂಷಣ ಪತ್ರಿಕೆ ಕಾರ್ಯಾಲಯದ ಉದ್ಘಾಟನಾ ಸಮಾರಂಭ ಜರುಗಲಿದೆ. ಹಿರಿಯ ಸಾಹಿತಿ ಡಾಕ್ಟರ್ ವೀರಣ್ಣ ರಾಜೂರ ಆಶಯ ನುಡಿಗಳನ್ನಾಡುವರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

ವಕ್ಫ್ ಆಸ್ತಿ ವಿವಾದಕ್ಕೆ ಸಂಬಂಧಿಸಿ, ರೈತರನ್ನು ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸುವುದಿಲ್ಲ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಹುಬ್ಬಳ್ಳಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಶಿಗ್ಗಾಂವಿ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಹಿನ್ನೆಲೆ, ಹುಲಗೂರ ಗ್ರಾಮದಲ್ಲಿ ನೆರೆದಿದ್ದ ಬೃಹತ್ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡಿದರು.

<><><>

ವಿಜಯಪುರದಲ್ಲಿ ಆಯೋಜಿಸಿದ್ದ, ಭಗವದ್ಗೀತಾ ಅಭಿಯಾನದಲ್ಲಿ, ಕೇಂದ್ರದ ಕಾರ್ಮಿಕ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಪಾಲ್ಗೊಂಡಿದ್ದರು.

<><><>

ಬರುವ 21 ರ ವರೆಗೆ, ರಾಜ್ಯಾದ್ಯಂತ ಕುಷ್ಠ ರೋಗ ಪತ್ತೆ ಅಭಿಯಾನ ಆಯೋಜಿತವಾಗಿದೆ. ಕು ್ಠ ರೋಗದ ಸಾಮಾಜಿಕ ಕಳಂಕ ತೊಡೆದು ಹಾಕಿ, ಚಿಕಿತ್ಸೆಗೆ ಸಹಕರಿಸಿ ಎಂದು, ಚಿತ್ರದುರ್ಗ ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಎನ್.ಎಸ್.ಮಂಜುನಾಥ, ಮನವಿ ಮಾಡಿದ್ದಾರೆ.

<><><>

ಕೊಪ್ಪಳ ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಅವರು, ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದ, ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ, ನೆರವೇರಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಕೋಟಿ ವೃಕ್ಷ ಅಭಿಯಾನ; ವಿಜಯಪುರ ಜಿಲ್ಲೆಯಲ್ಲಿ, ಯಶಸ್ವಿಯಾಗಿ ಮುಂದುವರಿಕೆ – ಎಂ.ಬಿ.ಪಾಟೀಲ.
- ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯ, 22 ಸಾವಿರ ಕೆರೆಗಳ ಅತಿಕ್ರಮಣ ತೆರವಿಗೆ ಕ್ರಮ – ಎನ್.ಎಸ್. ಬೋಸರಾಜು.
- ಕಾಫಿ ಗುಣಮಟ್ಟ ಹೆಚ್ಚಿಸುವ, ವಿನೂತನ ಯೋಜನೆಗೆ, ಭಾರತೀಯ ಕಾಫಿ ಮಂಡಳಿ ಯೋಜನೆ – ಕೆ.ಜಿ.ಜಗದೀಶ.
- ರಾಜ್ಯ ಜಾನಪದ ಅಕಾದೆಮಿ, 2023ನೇ ಸಾಲಿನ ಗೌರವ ಪ್ರಶಸ್ತಿಗೆ, 30 ಜಾನಪದ ಕಲಾವಿದರು ಭಾಜನ – ಗೊಲ್ಲಹಳ್ಳಿ ಶಿವಪ್ರಸಾದ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ